ಅಸಲು ದಾವಾ ಸಂಖ್ಯೆ . 276/2014

ಡಿ .ಡಬ್ಲ್ಯೂ-2
ದಿಃ 26-08-2021
ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋಧಿಸಲಾಯಿತು.

ಪಾಟೀ ಸವಾಲು ವಾದಿ ಪರ ಶ್ರೀ ಹೆಚ್ ಜಿ ಎಸ್ ವಕೀಲರಿಂದ ಃ-

ನಾನು ಹುಟ್ಟಿದಾಗಿನಿಂದ ನಮ್ಮ ಊರಿನಲ್ಲಿ ವಾಸವಿದ್ದೇನೆ. ರಾಮೋಜಿ ಅಲಿಯಾಸ್ ರಾಮಣ್ಣ ನನ್ನ ಸಂಬಂಧಿಕರು . ನಾನು ವ್ಯವಸಾಯ ಮಾಡುತ್ತೇನೆ. ನಾನು ನಮ್ಮ ಊರಿನಲ್ಲಿ ಬಿಲ್ ಕಲೆಕ್ಟರ್ ಆಗಿರುತ್ತೇನೆ ಎಂದರೆ ಈ ಹಿಂದೆ ಬಿಲ್ ಕಲೆಕ್ಟರ್ ಆಗಿ ಕೆಲಸ ಮಾಡಿರುತ್ತೇನೆ ಎಂದರು . ಆದ ಕಾರಣ ನನಗೆ ರಾಮೋಜಿ ರವರ ಮತ್ತು ಸುಧಾರವರ ಆಸ್ತಿಗಳ ವಿಚಾರ ಗೊತ್ತಿತ್ತು ಎಂದರೆ ಸರಿಯಲ್ಲ. ನಾನು ಗೊತ್ತಿಲ್ಲ ಎಂದು ಸುಳ್ಳು ಸಾಕ್ಷ್ಯನುಡಿಯುತ್ತಿದ್ದೇನೆಂದರೆ ಸರಿಯಲ್ಲ.

ಸುಧಾ ಎಂಬುವವರು ನಮ್ಮ ಊರಿನ ಮಗಳು. ಹಾಗಾಗಿ ನನಗೆ ಪರಿಚಯವಿರುತ್ತಾರೆ. ಅವರಿಗೆ ಜಮೀನು ಇರುತ್ತದೆ ಅದರ ಸಂಖ್ಯೆ ನನಗೆ ಗೊತ್ತಿರುವುದಿಲ್ಲ. ಅವರಿಗೆ ಒಂದು ಕಣ ಇದೆ. ಅದರ ಸಂಖ್ಯೆ ನನಗೆ ಗೊತ್ತಿರುವುದಿಲ್ಲ. ಪೂರ್ವ-ಪಶ್ಚಿಮ 78 , ಉತ್ತರ-ದಕ್ಷಿಣ 35 ಅಡಿ ಅಗಲ ಇರುತ್ತದೆ. ಸುಧಾ ಕೋಂ ವೀರೇಶಪ್ಪ ರವರ ಆಸ್ತಿಯು ಪೂರ್ವ-ಪಶ್ಚಿಮ 27 ಗಜ , ಉತ್ತರ-ದಕ್ಷಿಣ 20 ಗಜ ಎಂದರೆ ಸರಿಯಲ್ಲ. ಸದರಿ ಆಸ್ತಿಯಲ್ಲಿ ಅವರು ಮನೆ ಕಟ್ಟಿರುತ್ತಾರೆಂದು ಸೂಚಿಸಿದರೆ ಸರಿ . ಆದರೆ ಮೋಸ ಮಾಡಿರುತ್ತಾರೆ ಎಂದರು .

ಸುಧಾರವರಿಗೆ ದಾವಾ ಆಸ್ತಿ ಹೇಗೆ ಬಂತು ಎಂದು ನನಗೆ ಗೊತ್ತಿಲ್ಲ. ಕಾಳಮ್ಮ ಮತ್ತು ಹುಚ್ಚಪ್ಪ ರವರ ಆಸ್ತಿಯು ಅವರ ಸೊಸೆ ಸುಧಾರವರಿಗೆ ಬಂದಿರುತ್ತದೆ ಎಂದರೆ ಸರಿ. ಕಾಳಮ್ಮ ರವರು ರಂಗಪ್ಪರವರಿಗೆ 1977 ರಲ್ಲಿ ಕ್ರಯಪತ್ರ ಮಾಡಿಕೊಟ್ಟಿರುವ ವಿಚಾರ ನನಗೆ ಗೊತ್ತಿರುವುದಿಲ್ಲ ಮತ್ತು ರಂಗಪ್ಪರವರಿಗೆ 1992 ರಲ್ಲಿ ಹುಚ್ಚಪ್ಪರವರಿಗೆ ಅದೇ ಆಸ್ತಿಯನ್ನು ಮಾರಾಟ ಮಾಡಿರುತ್ತಾರೆಂದರೆ ನನಗೆ ಗೊತ್ತಿರುವುದಿಲ್ಲ. ರಂಗಪ್ಪರವರು ಮಾರಾಟ ಮಾಡಿರುವ ಆಸ್ತಿಯ ಅಳತೆಯಲ್ಲಿ ವ್ಯತ್ಯಾಸ ಇತ್ತು ಎಂದರೆ ನನಗೆ ಗೊತ್ತಿಲ್ಲ. ಸದರಿ 2 ಕ್ರಯಪತ್ರಗಳುದಾವಾ ಆಸ್ತಿಗೆ ಸಂಬಂಧಪಟ್ಟಿರುವುದು ಎಂದರೆ ಸರಿಯಲ್ಲ. ಸಾಕ್ಷಿ ಸ್ವತಃ ದುರುದ್ದೇಶದಿಂದ ಮಾಡಿಕೊಳ್ಳಲಾಗಿರುತ್ತದೆ ಎಂದರು . 1992 ರಿಂದ ಇವತ್ತಿನವರೆಗೂ ಸುಧಾ ರವರು ಸ್ವಾಧೀನದಲ್ಲಿದ್ದಾರೆಂದರೆ ಸರಿ .

ಕಾಳಮ್ಮ ಕೋಂ ಹುಚ್ಚಪ್ಪ ರವರು 2011 ರಲ್ಲಿ ಪ್ರಕಾಶ್ ರವರಿಂದ ದಾವಾ ಆಸ್ತಿಯನ್ನು ಖರೀದಿ ಮಾಡಿರುತ್ತಾರೆಂದರೆ 17 ½ ಇಂಟು 78 ಅಡಿ ಉದ್ದ ಮಾತ್ರ ಖರೀದಿ ಮಾಡಿರುತ್ತಾರೆಂದರು . ಸದರಿ ಕ್ರಯಪತ್ರ ವ್ರನೋಂದಣಿ ಆಗಿರುತ್ತದೆ ಎಂದರೆ ಸರಿ . ಹಾಲಿ ಖಾತೆ ಸುಧಾರವರ ಹೆಸರಿಗೆ ಇದೆ ಎಂದರೆ ಸರಿ . ದಾವಾ ಆಸ್ತಿಗೆ ಸಂಪೂರ್ಣ ಹಕ್ಕುದಾರರು ವಾದಿ ಎಂದರೆ ಸರಿಯಲ್ಲ. ನನ್ನ ಪ್ರಮಾಣ ಪತ್ರ ದಲ್ಲಿನ ವಿಚಾರಗಳು ಸುಳ್ಳಿನಿಂದ ಕೂಡಿರುತ್ತದೆ ಎಂದರೆ ಸರಿಯಲ್ಲ. ಪ್ರತಿವಾದಿಯ ಖಾತಾ ಎಕ್ಟ್ರಾಟ್ ನ್ನು ನಾನು ಬಿಲ್ ಕಲೆಕ್ಟರ್ ಆಗಿದ್ದಾಗ ತಿದ್ದುಪಡಿ ಮಾಡಿರುತ್ತೇನೆಂದರೆ ಸರಿಯಲ್ಲ. ಆದ ಕಾರಣ ನಾನು ರಾಮೋಜಿ ಪರ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆಂದರೆ ಸರಿಯಲ್ಲ. ರಾಮೋಜಿ , ಗೋವಿಂದಪ್ಪ , ಚಂದ್ರಪ್ಪ ರವರುಗಳು ಸೇರಿ ವಾದಿಯ ಆಸ್ತಿಯನ್ನು ಒತ್ತುವರಿ ಮಾಡಿರುತ್ತಾರೆಂದರೆ ಸರಿಯಲ್ಲ. ನನಗೆ ಸದರಿ ವಿಚಾರ ಗೊತ್ತಿದ್ದರೂ ಸಹ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆಂದರೆ ಸರಿಯಲ್ಲ. ಸುಧಾ , ಗೋವಿಂದಪ್ಪ , ಚಂದ್ರಪ್ಪ ರವರ ನಡುವೆ ಯಾವುದಾದರೂ ವ್ಯಾಜ್ಯ ಇತ್ತಾ ಎಂಬ ಪ್ರಶ್ನೆಗೆ ಇಲ್ಲ ಎಂದರು . ವಾದಿಯವರು ಮನೆಯನ್ನು ಕಟ್ಟಿಕೊಂಡಿರುತ್ತಾರೆ . ರಾಮಣ್ಣ ರವರು ಮನೆ ಕಟ್ಟುವ ಸಂಬಂಧದಲ್ಲಿ ವಾದಿಯು ತಕರಾರು ಮಾಡಿರುತ್ತಾರೆ ಎಂದರು .

ದಾವಾ ಆಸ್ತಿ ದಕ್ಷಿಣ ಭಾಗಕ್ಕೆ ಪೂ- ಪ 25 ಅಡಿ, ಉ-ದ 81 ಅಡಿ . ವಾದಿಯ ಆಸ್ತಿಯನ್ನು ಪ್ರತಿವಾದಿಯವರು ಒತ್ತುವರಿ ಮಾಡಿರುತ್ತಾರೆಂದರೆ ಸರಿಯಲ್ಲ. 2004 ರಲ್ಲಿ ಸುಧಾರವರು ಒತ್ತುವರಿ ಜಾಗವನ್ನು ಬಿಟ್ಟುಕೊಡಲು ಕೇಳಿದ್ದು ವ್ಯಾಜ್ಯ ಉಂಟಾಗಿರುತ್ತದೆ ಎಂದರೆ ಸರಿಯಲ್ಲ. ನನಗೆ ಎಲ್ಲಾ ವಿಚಾರಗಳು ಗೊತ್ತಿದ್ದರೂ ಸಹ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆಂದರೆ ಸರಿಯಲ್ಲ. 3 ನೇ ಪ್ರತಿವಾದಿ ಜಾಗದಲ್ಲಿ ವಾದಿಯು ಯಾವುದೇ ಒತ್ತುವರಿ ಮಾಡಿರುವುದಿಲ್ಲ ಎಂದರೆ ಸರಿಯಲ್ಲ. ಒತ್ತುವರಿ ಬಗ್ಗೆ ಯಾವುದೇ ರೀತಿಯ ಕೌಂಟರ್ ಕ್ಲೇಮ್ ಇಲ್ಲ ಎಂದರೆ ಸರಿ. ಆದರೆ ಗ್ರಾಮಸ್ಥರು ಹೇಳಿ ಹೋಂದಾಣಿಕೆ ಮಾಡಿಕೊಂಡಿರುತ್ತಾರೆ ಎಂದರು .

ಪಾಟೀ ಸವಾಲು 3 ನೇ ವಾದಿ ಪರ ಶ್ರೀ ಎಸ್ ಬಿ ಪಿ ವಕೀಲರಿಂದ ಃ-

ಚಂದ್ರಪ್ಪರವರ ನನಗೆ ಪರಿಚಯಸ್ಥರು . ಅವರ ಆಸ್ತಿ ಸಂಖ್ಯೆ 205, 254 ಎಂದರೆ ಸರಿ . ಅದರು ಒಟ್ಟು ಅಳತೆ 25 ಇಂಟು 30 ಎಂದರೆ ಸರಿ . ಸದರಿ ಜಾಗವು 3 ನೇ ಪ್ರತಿವಾದಿ ತಂದೆ ಪರಮೇಶ್ವರಪ್ಪರವರ ಹೆಸರಿಗೆ ಇದೆ ಎಂದರೆ ಸರಿ . ಸದರಿ ಜಾಗದಲ್ಲಿ 3 ನೇ ಪ್ರತಿವಾದಿಯವರು ವೆಲ್ಡಿಂಗ್ ಶಾಪ್ 30 ವರ್ಷಗಳಿಂದ ನಡೆಸುತ್ತಿದ್ದಾರೆಂದರೆ ಸರಿ . ವಾದಿ ಮತ್ತು ಪ್ರತಿವಾದಿಗಳು

ಅವರವರ ಜಾಗದಲ್ಲಿ ಪ್ರತ್ಯೇಕವಾಗಿದ್ದಾರೆ ಎಂದರೆ ಸರಿ . ಸುಧಾರವರು 3 ನೇ ಪ್ರತಿವಾದಿಯ ಜಾಗದಲ್ಲಿ ½ ಅಡಿ ಸ್ಟೇರ್ ಕೇಸ್ ಒತ್ತುವರಿ ಮಾಡಿರುತ್ತಾರೆಂದರೆ ಸರಿ .

ವೆಲ್ಡಿಂಗ್ ಶಾಪ್ ನ ಪಶ್ಚಿಮ ದಿಕ್ಕಿಗೆ ಪಿಡಬ್ಲ್ಯೂಡಿ ರಸ್ತೆ ಎಂದರೆ ಸರಿ . 3 ನೇ ಪ್ರತಿವಾದಿಯು ತಮ್ಮ ಪಿತ್ರಾರ್ಜಿತ ಆಸ್ತಿಯಲ್ಲಿ ಸ್ವಾಧೀನಾನುಭವದಲ್ಲಿದ್ದಾರೆ ಎಂದರೆ ಸರಿ .

ಮರುವಿಚಾರಣೆ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಲಾಯಿತು.)

ಓದಿ ಹೇಳಿ ಕೇಳಿ ಸರಿ ಇದೆ.

ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಜೆಎಂಎಫ್‌ಸಿ
ಹೊನ್ನಾಳಿ.